# ಕಾರ್ಯಕಾರಿ ಸಾರಾಂಶ

## ಹಿನ್ನೆಲೆ

ಕಳೆದ 2012 ರ ಜನಗಣತಿಯ ಪ್ರಕಾರ ಜಾನುವಾರುಗಳ ಜನಸಂಖ್ಯೆ ಕರ್ನಾಟಕದಲ್ಲಿ ಕೇವಲ 27.7 ಮಿಲಿಯನ್ ಆಗಿತ್ತು, ಇದು 2019 ರ ವೇಳೆಗೆ 29 ಮಿಲಿಯನ್‌ಗೆ ಏರಿಕೆಯಾಗಿರುದೊಂದಿಗೆ ದೇಶದಲ್ಲಿ 11ನೇ ಸ್ಥಾನದಲ್ಲಿದೆ ಎಂಬುವದು ದ್ವಿತೀಯ ದತ್ತಾಂಶ ವಿಶ್ಲೇಷನಣೆಗಳ ಮೂಲಕ ಕಾಣಬಹುದು, ರಾಷ್ಟ್ರದ ಹಾಲು, ಮೊಟ್ಟೆ ಮತ್ತು ಮಾಂಸ ಉತ್ಪಾದನೆಗೆ ಗಮನಿಸಿದಾಗ, ಕರ್ನಾಟಕದ ಕೊಡುಗೆ ಕೇವಲ ಶೇ. 4.2 ರಷ್ಟು ಹಾಲು, ಶೇ. 5.8 ರಷ್ಟು ಮೊಟ್ಟೆ ಮತ್ತು ಶೇ. 4.5 ರಷ್ಟು ಮತ್ತು ಮಾಂಸ ವಾಗಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ / ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಭಾ.ವೈ.ಸಂ.ಮಂ) 11 ಕೆಜಿ/ವ್ಯಕ್ತಿ/ವರ್ಷ ಮಾಂಸದ ಅಗತ್ಯವನ್ನು ಶಿಫಾರಸು ಮಾಡಿದೆ, ಆದರೆ ಪ್ರಸ್ತುತ ಲಭ್ಯತೆ ಕೇವಲ 5 ಕೆ.ಜಿ/ವ್ಯಕ್ತಿ/ವರ್ಷ ರಷ್ಟೆ ಇದೆ. ಜಾನುವಾರುಗಳ ಪ್ರಾಮುಖ್ಯತೆ ಅದರ ಆಹಾರ ಉತ್ಪಾದನೆ ಮೀರಿ ಬಹು ಉಪಯೋಗಕರವಾಗಿದೆ, ಸುರ್ಸಜಿತ ಮಾರುಕಟ್ಟೆಗಳ ಪ್ರವೇಶದ ಕೊರತೆ, ಸುಧಾರಿತ ತಂತ್ರಜ್ಞಾನ ಮತ್ತು ಗುಣಮಟ್ಟದ ಒಳ ಹರಿವುಗಳನ್ನು ಹಾಗು ಅಳವಡಿಸಿಕೊಳ್ಳಲು ರೈತರಿಗೆ ಪ್ರೋತ್ಸಾಹಕವಾಗಿ ಕಾರ್ಯನಿರ್ವಹಿಸುವುದು ಅತ್ಯವಶ್ಯಕವಾಗಿದೆ. ಈ ಕ್ಷೇತ್ರ ಎದುರಿಸುತ್ತಿರುವ ಇತರ ಪ್ರಮುಖ ಸವಾಲುಗಳೆಂದರೆ ಸಾಲ ಮತ್ತು ಆಹಾರ/ಮೇವಿನ ಅಸಮರ್ಪಕ ಲಭ್ಯತೆ. ಈ ಸಮಸ್ಯೆಗಳನ್ನು ಪರಿಹರಿಸಲು, ಕರ್ನಾಟಕ ಸರ್ಕಾರ (ಕ.ಸ) 2015–16 ರಲ್ಲಿ ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ (ಪ.ಪಾ. ಮತ್ತು ಪ.ವೈ. ಸೇ. ಇಲಾಖೆ) ಮೂಲಕ ಈ ಕೆಳಗಿನ ನಿರ್ದಿಷ್ಟ ಉದ್ದೇಶಗಳೊಂದಿಗೆ 'ಪಶು ಭಾಗ್ಯ' ಯೋಜನೆಯನ್ನು ಜಾರಿಗೆ ತರಲಾಯಿತು: (i) ಜಾನುವಾರುಗಳಿಂದ ಆದಾಯವನ್ನು ಹೆಚ್ಚಿಸಲು ಉತ್ಪಾದನೆ ಮತ್ತು ಉತ್ಪಾದಕತೆ ವರ್ಧನೆ ಮತ್ತು ಉದ್ಯೋಗ ಸೃಷ್ಟಿಯ ಮೂಲಕ ಚಟುವಟಿಕೆಗಳಿಗೆ ಪ್ರೋತ್ಸಾಹ ನಿಡುವದು. (ii) ಅತಿ ಸಣ್ಣ ಮತ್ತು ಸಣ್ಣ ರೈತರು, ಕೃಷಿ ಕಾರ್ಮಿಕರು, ವಿಧವೆಯರು, ನಿರ್ಗತಿಕ ಮತ್ತು ದೇವದಾಸಿ ಮಹಿಳೆಯರಿಗೆ ಹೈನುಗಾರಿಕೆ, ಕುರಿ ಮತ್ತು ಮೇಕೆ ಅಥವಾ ಹಂದಿ ಸಾಕಣೆ ಮತ್ತು ಕೋಳಿ ಘಟಕಗಳನ್ನು ಸ್ಥಾಪಿಸಲು ಸಹಾಯ ನಿಡುವುದರೊಂದಿಗೆ ಜೀವನೋಪಾಯದ ಭದ್ರತೆಯನ್ನು ಕಾಪಾಡುವದು (iii) ಕುಟುಂಬದ ಪೌಷ್ಟಿಕಾಂಶದ ಸ್ಥಿತಿಯನ್ನು ಹೆಚ್ಚಿಸಲು ಫಲಾನುಭವಿಗಳನ್ನು ಹುರಿದುಂಬಿಸುವಲ್ಲದೆ/ಉತ್ತೇಜಿಸುವದಲ್ಲದೆ ಅವರ ಸಂಖ್ಯೆಯನ್ನು ಹೆಚ್ಚಿಸಿಸುವದು.

## ಅಧ್ಯಯನದ ನಿರ್ದಿಷ್ಟ ಉದ್ದೇಶಗಳು

1. ಮಾರ್ಗಸೂಚಿಗಳ ಪ್ರಕಾರ ಯೋಜನೆಯ ಅನುಷ್ಠಾನದ ಕಾರ್ಯವಿಧಾನಗಳ ಪರಿಶೀಲನೆ–ಪ್ರಕ್ರಿಯೆ, ಅನುಷ್ಠಾನ ವಿಧಾನ ಮತ್ತು ವ್ಯಾಪ್ತಿ, ಮೇಲ್ವಿಚಾರಣೆ ಮತ್ತು ಫಲಾನುಭವಿಗಳ ಆಯ್ಕೆಯ ವಿಧಾನಗಳು.
2. ಜಾನುವಾರು ಉತ್ಪಾದನೆ ಮತ್ತು ಉತ್ಪಾದಕತೆ, ಫಲಾನುಭವಿಗಳಲ್ಲಿ ಉದ್ಯೋಗ ಸೃಷ್ಟಿ ಮತ್ತು ಕುಟುಂಬದ ಆದಾಯದ ಮೇಲೆ ಪಶು ಭಾಗ್ಯ ಯೋಜನೆಯ ಪರಿಣಾಮವನ್ನು ಅಂದಾಜು ಮಾಡುವದು
3. ಯೋಜನೆಯ ಮಧ್ಯಸ್ಥಿಕೆಗಳು ಫಲಾನುಭವಿಗಳ (ಗ್ರಾಮೀಣ ಸಮಾಜದ ಬಡ ಮತ್ತು ಅಗತ್ಯವಿರುವ ವರ್ಗಗಳು) ಆಹಾರ, ಶಿಕ್ಷಣ ಲಭ್ಯತೆ, ಆರೋಗ್ಯ, ಆಸ್ತಿಯ ವೃದ್ಧಿಯ ಮೇಲೆ ಪರಿಣಾಮವನ್ನು ನಿರ್ಧರಿಸುವದ
4. ಅಧ್ಯಯನ ಪ್ರದೇಶದಲ್ಲಿ ವಿವಿಧ ಮಾರುಕಟ್ಟೆಯ ಜಾಲತಾಣಗಳು ಮತ್ತು ಜಾನುವಾರುಗಳ ವ್ಯಾಪಾರ ಹಾಗು ಅದರ ಉತ್ಪನ್ನ/ ಉಪ–ಉತ್ಪನ್ನಗಳ ಮಾರಾಟದಲ್ಲಿ ಆಗಿರುವ ಬದಲಾವಣೆಗಳನ್ನು ಪರೀಕ್ಷಿಸುವದು.
5. ಯೋಜನೆಯ ಸ್ವರೂಪ ಮತ್ತು ಪ್ರಕ್ರಿಯೆ, ಗುಣಮಟ್ಟ, ಪರಿಣಾಮ, ಸಹಾಯ ಧನ ವಿತರಣೆ, ಮರುಪಾವತಿ, ತಾಂತ್ರಿಕ ಬೆಂಬಲ ಮತ್ತು ಮಾಹಿತಿ ವೃದ್ಧಿಕರ್ಣದ ಬಗ್ಗೆ ವಿವಿಧ ಪಾಲುದಾರರ ಗ್ರಹಿಕೆಯನ್ನು ಖಚಿತಪಡಿಸಿಕೊವುದು
6. ಜಾನುವಾರುಗಳ ದತ್ತು ಮತ್ತು ಪೋಷಣೆಗಾಗಿ ಸಾಮರ್ಥ್ಯ ನಿರ್ಮಾಣ ಚಟುವಟಿಕೆಗಳ ಲಾಭದಾಯಕ ಪರಿಣಾಮವನ್ನು ವಿಶ್ಲೇಷಿಸುವುದು.

## ದತ್ತಾಂಶ ಮತ್ತು ಅಧ್ಯಯನದ ವಿಧಾನ

ಈ ಬಹು–ಆಯಾಮ ಪರಿಣಾಮ ಮೌಲ್ಯಮಾಪನ ಅಧ್ಯಯನವು ಭೌಗೋಳಿಕ, ಪ್ರಾದೇಶಿಕ–ತಾತ್ಕಾಲಿಕ, ಸಾಮಾಜಿಕ, ಸಾಂಸ್ಥಿಕ ಮತ್ತು ಆರ್ಥಿಕ ಅಂಶಗಳ ಆಧಾರಿತ ಮೌಲ್ಯಮಾಪನ ವಾಗಿರುದಲದೆ ಯೋಜನೆಯ ಉದ್ದೇಶಗಳನ್ನು ಪೂರೈಸುವ ಹಾಗು ಅದರ ಪ್ರಯೋಜನಗಳನ್ನು ಅಳವಡಿಸಿಕೊಳ್ಳುವದರಲ್ಲಿ ಸಾದಿಸಿರುವ ಸಾಧನೆಗಳನ್ನು ಒಳಗೊಂಡಿರುತ್ತದೆ. ಫಲಾನುಭವಿಗಳನ್ನು, ವಿವಿದ ವಲಯಗಳ ವೈಶಿಷ್ಟತೆಯನ್ನು ಪರಿಗಣಿಸಿ ಬಹು–ಹಂತದ, ಭೌಗೋಳಿಕವಾಗಿ, ಶ್ರೇಣೀಕೃತ ಹಾಗು ಯಾದೃಚ್ಛಿಕ ಮಾದರಿ ಗಾತ್ರ ತಂತ್ರ ಅಳವಡಿಸಿಕೊಳ್ಳಲಾಗಿದೆ. ಹತ್ತು ಪ್ರಮುಖ (10) ಕೃಷಿ–ಹವಾಮಾನ ವಲಯಗಳನ್ನು ಪ್ರತಿನಿಧಿಸುವ ಹತ್ತು ಜಿಲ್ಲೆಗಳನ್ನು ಅಧ್ಯಯನಕ್ಕಾಗಿ ಆಯ್ಕೆಮಾಡಲಾಯಿತು. ತದನಂತರ ತಾಲೂಕುಗಳು ಮತ್ತು ಗ್ರಾಮ ಪಂಚಾಯತ್‌ಗಳನ್ನು (ಗ್ರಾ.ಪಂ) ಗರಿಷ್ಠ, ಮಧ್ಯಮ ಮತ್ತು ಕಡಿಮೆ ಗಾತ್ರ ಫಲಾನುಭವಿಗಳ ಪ್ರದೇಶ ಎಂದು ವರ್ಗೀಕರಿಸಲಾಗಿದೆ. ಪ್ರತಿ ತಾಲೂಕಿನಲ್ಲಿ 5 ರಿಂದ 6 ಗ್ರಾ.ಪಂ.ಗಳನ್ನು ಗುರುತಿಸಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಅಂತಿಮವಾಗಿ ಪಶು ಭಾಗ್ಯ ಯೋಜನೆಯ ಪರಿಣಾಮ ಅಂದಾಜು ಮಾಡಲು 1480 ಫಲಾನುಭವಿಗಳು ಹಾಗೂ 128 ಫಲಾನುಭವಿಗಳಲ್ಲದವರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಫಲಾನುಭವಿಗಳು ಮತ್ತು ಫಲಾನುಭವಿಗಳಲ್ಲದವರ ಆಯ್ಕೆಯನ್ನು ಒಂದೇ ಸ್ಥಳದಿಂದ ಮಾಡಿರುವುದು ಪರಿಣಾಮವನ್ನು ಕಂಡುಕೊಳ್ಳಲು ಸಾಹಾಯಕವಾಗಿರುತ್ತದೆ. ಪ್ರತಿ ಮಾದರಿ ಜಿಲ್ಲೆಯಲ್ಲಿ, ಹಸು/ಎಮ್ಮೆ, ಕುರಿ/ಮೇಕೆ, ಕೋಳಿ ಮತ್ತು ಹಂದಿ ಸಾಕಣೆಯಿಂದ ತಲಾ ಒಂದರಂತೆ 4 ಕೇಂದ್ರೀಕೃತ ಗುಂಪುಗಳ ಚರ್ಚೆ (ಫೋಕಸ್ ಗ್ರೂಪ್ ಸಭೆ) ಗಳನ್ನು ಬಳಸಿಕೊಂಡು ಅಂಕಿ ಸಂಖ್ಯೆಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದಲ್ಲದೆ, ಯೋಜನೆಯ ಅನುಷ್ಠಾನದ ಎಲ್ಲಾಭಾಗಿಧಾರರಿಂದ (ಮಧ್ಯಸ್ಥಗಾರರಿಂದ/ ಮಧ್ಯವರ್ತಗಳಿಂದ) ವಿವರಗಳನ್ನು ಸಂಗ್ರಹಿಸಲಾಗಿದೆ.

ಪ್ರಾಥಮಿಕ ದತ್ತಾಂಶವನ್ನು ವಿವರಣಾತ್ಮಕ, ಸಂಖ್ಯಾಶಾಸ್ತ್ರದ ಸರಾಸರಿ, ಶ್ರೇಣಿ, ಶೇಕಡಾವಾರು ಮತ್ತು ಶ್ರೇಯಾಂಕಗಳನ್ನು ಅದರಿಸಿ ವಿಶ್ಲೇಷಿಸಲಾಗಿದೆ. ಪಶುಭಾಗ್ಯ ಯೋಜನೆಯ ಪರಿಣಾಮವನ್ನು 2015–16 ರಿಂದ 2018–19 ರ ಅವಧಿಗೆ ಅನುಷ್ಠಾನಗೊಂಡ ಯೋಜನೆಯ ಫಲಾನುಭವಿಗಳಲ್ಲಿ (ಸ್ವೀಕೃತಿಯ ಮೊದಲು ಮತ್ತು ನಂತರದಲ್ಲಿ ಆದ ಬದಲಾವಣೆಗಳನ್ನು ಹೋಲಿಸುವ ಮೂಲಕ. ಮೌಲ್ಯಮಾಪನ ಮಾಡಲಾಗಿದೆ. ಉದಾಹರಣೆಗೆ ಯೋಜನೆಯ ಪ್ರಾರಂಭದ ವರ್ಷದಲ್ಲಿ (2015–16) ಪಡೆದ ಪ್ರಯೋಜನಗಳನ್ನು, 2014–15 ರ ಸಂಗ್ರಹಿಸಿದ ಮಾಹಿತಿಯ ಜೊತೆಗೆ ಪರಿಸ್ಥಿತಿಯ ಮೊದಲು ಮತ್ತು ನಂತರದ ಪರಿಣಾಮವನ್ನು ಹೊಲಿಕೆಮಾಡುವುದರ ಮೂಲಕ ಅಂದಾಜು ಮಾಡಲಾಗಿದೆ.

ಮೌಲ್ಯಮಾಪನ ಮಡಲಾಗಿರು ಪ್ರಮುಖ ಅಂಶಗಳೆಂದರೆ ಜಾನುವಾರುಗಳ ಸಂಖ್ಯೆ, ಉತ್ಪಾದನೆ, ಉತ್ಪಾದಕತೆ, ಆದಾಯ, ಉದ್ಯೋಗ ಸೃಷ್ಟಿ, ಜಾನುವಾರುಗಳ ಮಲ ಮೂತ್ರಗಳ ಲಭ್ಯತೆಯಿಂದಾಗಿ ರಾಸಾಯನಿಕ ಗೊಬ್ಬರದ ಬಳಕೆಯಲ್ಲಿನ ಕಡಿತ, ಬೆಳೆ ಪದ್ದತಿ ಮತ್ತು ನಿರ್ದಿಷ್ಟವಾಗಿ ಮೇವಿನ ಬೆಳೆ ಮಾದರಿ, ಬೆಳೆ ಉತ್ಪಾದನೆ ಮತ್ತು ಉತ್ಪಾದಕತೆ, ಪೌಷ್ಟಿಕ ಬೆಂಬಲ, ಆಸ್ತಿ ಸುಧಾರಣೆ, ಕಾರ್ಮಿಕರ ವಲಸೆಯ ಕಡಿತ, ತರಬೇತಿಯ ಪರಿಣಾಮ, ವಿವಿಧ ಸಾಮಾಜಿಕ ಮತ್ತು ಕೃಷಿ ಸಮುದಾಯಗಳ ನಡುವೆ ಮಾರುಕಟ್ಟೆ ವ್ಯವಸ್ಥೆ. ಜೊತೆಗೆ ಸಾಮರ್ಥ್ಯ, ದೌರ್ಬಲ್ಯ, ಅವಕಾಶ, ಬೆದರಿಕೆಗಳ (SWOT) ಮತ್ತು ಸುಸ್ಥಿರ ಜೀವನೋಪಾಯದ ಚೌಕಟ್ಟಿನ ತುಲನಾತ್ಮಕ ವಿಶ್ಲೇಷಣೆಯನ್ನು ಸಹ ಕೈಗೊಳ್ಳಲಾಗಿದೆ.

## ಅಧ್ಯಯನದ ಆವಿಷ್ಕಾರಗಳು

ಜಾನುವಾರುಗಳ ಜನಸಂಖ್ಯೆ, ಉತ್ಪಾದನೆ ಮತ್ತು ಬೆಳವಣಿಗೆಯ ದರ: 20ನೇ ಜಾನುವಾರು ಗಣತಿಯ (2019) ಪ್ರಕಾರ, ಕರ್ನಾಟಕವು ಸುಮಾರು 11.5 ಮಿಲಿಯನ್ ಹಸುಗಳು ಮತ್ತು ಎಮ್ಮೆಗಳು, 17.2 ಮಿಲಿಯನ್ ಕುರಿ / ಮೇಕೆಗಳು, 0.32 ಮಿಲಿಯನ್ ಹಂದಿಗಳು ಮತ್ತು 59.6 ಮಿಲಿಯನ್ ಕೋಳಿಗಳನ್ನು ಹೊಂದಿದೆ. 2011–12ರ

ಸಮೀಕ್ಷೆನ್ನು ಹೋಲಿಸಿದರೆ 2019–20ಕ್ಕೆ ರಾಜ್ಯದಲ್ಲಿ ಹಾಲಿನ ಉತ್ಪಾದನೆಯಲ್ಲಿ ಶೇ. 165.7 ರಷ್ಟು, ಮೊಟ್ಟೆ ಉತ್ಪಾದನೆಯಲ್ಲಿ ಶೇ. 192.84 ರಷ್ಟು ಮತ್ತು ಮಾಂಸ ಉತ್ಪಾದನೆಯಲ್ಲಿ ಶೇ. 218.44 ರಷ್ಟು ಹೆಚ್ಚಳವಾಗಿರುವದು ಕಾಣಬಹುದು. ಇದಲ್ಲದೆ, ಹಾಲಿನ ಉತ್ಪಾದನೆಯಲ್ಲಿ ವಾರ್ಷಿಕ ಒಟ್ಟಾರೆ ಬೆಳವಣಿಗೆ ದರ (2011–12 ರಿಂದ 2019–20) ಶೇ 5.68 ರಷ್ಟು, ಮೊಟ್ಟೆ ಉತ್ಪಾದನೆಯಲ್ಲಿ ಶೇ. 10.19 ರಷ್ಟು ಮತ್ತು ಮಾಂಸ ಉತ್ಪಾದನೆಯಲ್ಲಿ ಶೇ. 8.60 ರಷ್ಟು ಹೆಚ್ಚಾಗಿರುವದು ಕಂಡುಬರುತ್ತದೆ.

**ಪಶು ಭಾಗ್ಯ ಯೋಜನೆಯ ಪ್ರಕ್ರಿಯೆ ಮತ್ತು ಅನುಷ್ಠಾನ:** ಈ ಯೋಜನೆಯ ಅನುಷ್ಠಾನವನ್ನು ಕೇಂದ್ರ ಸರ್ಕಾರದ ಯೋಜನೆಗಳ ಮತ್ತು ರಾಷ್ಟ್ರೀಯ ಜಾನುವಾರು ಮಿಷನ್ (ಎನ್.ಎಲ್.ಎಂ) ಮಾರ್ಗಸೂಚಿಯನ್ವಯ, ಮತ್ತು ಪಶುಪಾಲನಾ ಇಲಾಖೆಯ ಸರ್ಕಾರದ ಕಾರ್ಯದರ್ಶಿ ನೇತೃತ್ವದ ರಾಜ್ಯ ಮಟ್ಟದ ಮಂಜೂರಾತಿ ಮತ್ತು ಮೇಲ್ವಿಚಾರಣಾ ಸಮಿತಿಯ (ಎಸ್.ಎಲ್.ಎಸ್.ಎಂ.ಸಿ) ನಡಾವಳಿಗಳನ್ನು ಆಧರಿಸಿ ಅನುಷ್ಠಾನಗೋಳಿಸಲಾಗಿದೆ.

ಯೋಜನೆಯ ಆರಂಭದಲ್ಲಿ (2015–16ರಲ್ಲಿ) ಪ.ಜಾ/ಪ.ಪಂ. ಗಳಿಗೆ ಶೇ. 33 ರಷ್ಟು ಮತ್ತು ಇತರೆ ವರ್ಗಗಳಿಗೆ ಶೇ. 25 ರಷ್ಟು ಸಹಾಯಧನವನ್ನು ನೀಡಲಾಗಿದೆ. ನಂತರ 2019–2020ರ ಅವಧಿಯಲ್ಲಿ ಪ.ಜಾ/ಪ.ಪಂ ಅಭ್ಯರ್ಥಿಗಳಿಗೆ ಸಹಾಯ ಧನದ ಮೊತ್ತವನ್ನು ಶೇ. 90 ಮತ್ತು ಇತರ ವರ್ಗಗಳಿಗೆ ಶೇ. 50 ರಷ್ಟು ಕ್ಕೆ ಹೆಚ್ಚಿಸಲಾಗಿದೆ. ಪ್ರತಿ ಕುಟುಂಬ ಅಥವಾ ಘಟಕಕ್ಕೆ (2 ಹಸುಗಳು ಅಥವಾ ಎಮ್ಮೆ / 10+1 ಕುರಿ ಅಥವಾ ಆಡು/ 3+1 ಹಂದಿ, 200/500 ಕೋಳಿ) ಗರಿಷ್ಠ ಮಿತಿಯನ್ನು ನಿಗದಿಪಡಿಸಲಾಗಿದೆ. ಪ್ರತಿ ಘಟಕಕ್ಕೆ ನಿಗದಿಪಡಿಸಲಾಗಿದ ಗರಿಷ್ಠ ವೆಚ್ಚ ಹೀಗಿದೆ ರೂ. 1.2 ಲಕ್ಷ ಹಸುವಿಗೆ, ರೂ. 0.67 ಲಕ್ಷ ಕುರಿ/ಮೇಕೆಗೆ, ರೂ. 0.9 ಲಕ್ಷ ಹಂದಿ ಸಾಕಣೆಗೆ ಮತ್ತು ರೂ. 0.85 ಲಕ್ಷ/1.1 ಲಕ್ಷ ಕೋಳಿಗಳಿಗೆ.

## ಪಶು ಭಾಗ್ಯ ಯೋಜನೆಯ ಸಾಧನೆ

**ವರ್ಷವಾರು ಪ್ರಗತಿ:** ಸಂಗ್ರಹಿಸಲಾದ ದತ್ತಾಂಶಗಳನ್ನು ವಿಶ್ಲೇಷಿಸಿದಾಗ ಅತ್ಯಧಿಕ ಗುರಿಯ ಸಾಧನೆಯನ್ನು ಹಸು/ಎಮ್ಮೆಗಳ ಅಡಿಯಲ್ಲಿ ಸಾಧಿಸಲಾಗಿದೆ (ಶೇ. 125 ರಷ್ಟು ಸಾಧನೆ), ನಂತರ ಕುರಿ/ಆಡುಗಳು (ಶೇ. 95 ರಷ್ಟು), ಹಂದಿ ಸಾಕಾಣಿಕೆ (ಶೇ. 89 ರಷ್ಟು) ಮತ್ತು ಕೋಳಿ (ಶೇ. 98 ರಷ್ಟು) ಗಳಲ್ಲಿ ಸಾಧಿಸಲಾಗಿದೆ. ನಿಗದಿಪಡಿಸಿದ ಸುಮಾರು ರೂ. 137 ಕೋಟಿ ರೂಪಾಯಿಯಲ್ಲಿ, ರೂ. 127.5 ಕೋಟಿ ಬಿಡುಗಡೆ ಮಾಡಲಾಗಿದ್ದು. 2015–16 ರಿಂದ 2018–19ರ ಅವಧಿಯಲ್ಲಿ ರೂ. 124 ಕೋಟಿಗಳನ್ನು ಯೋಜನೆಗೆ ಬಳಸಿಕೊಳ್ಳಲಾಗಿದೆ.

**ಫಲಾನುಭವಿಗಳು ಮತ್ತು ಫಲಾನುಭವಿಗಳಲ್ಲದವರ ವಿವರ:** ಅಧ್ಯಯನ ಕ್ಷೇತ್ರದಲ್ಲಿ, ಮಾದರಿ ಫಲಾನುಭವಿಗಳ ವಿವರಗಳನ್ನು ನೊಡಿದಾಗ ಸಾಮಾನ್ಯ (ಶೇ. 79 ರಷ್ಟು), ಪ.ಜಾ. (ಶೇ. 12.6 ರಷ್ಟು) ಮತ್ತು ಪ.ಪಂ. (ಶೇ. 7.5 ರಷ್ಟು) ಅನ್ನು ಒಳಗೊಂಡಿರುತ್ತದೆ. ಹೆಚ್ಚಿನ ಫಲಾನುಭವಿಗಳು ಕೃಷಿ ಅವಲಬಿಂತರಾಗಿದ್ದು ಸಣ್ಣ ರೈತರು (ಶೇ. 53.9 ರಷ್ಟು), ನಂತರ ಭೂರಹಿತರು (ಶೇ. 18.2 ರಷ್ಟು), ಅತೀ ಸಣ್ಣ ರೈತರು (ಶೇ. 13.0 ರಷ್ಟು), ಮಧ್ಯಮ ರೈತರು (ಶೇ. 12 ರಷ್ಟು), ವಿಧವೆಯರು ಮತ್ತು ಸಂಕಷ್ಟದಲ್ಲಿರುವ ಮಹಿಳೆಯರು (ಶೇ. 2.8 ರಷ್ಟು) ಮತ್ತು ದೊಡ್ಡ ರೈತರು (ಶೇ. 0.2 ರಷ್ಟು) ಇದರ ಲಾಭಪಡೆದು ಕೊಂಡಿರುತ್ತಾರೆ. ಫಲಾನುಭವಿಗಳ ಕುಟುಂಬದ ಸಂಖ್ಯೆ ಸರಾಸರಿ ಗಾತ್ರ 2.7 ಆದರೆ ಫಲಾನುಭವಿಗಳಲ್ಲದವರಲ್ಲಿ ಇದು 3.2 ಆಗಿರುತ್ತದೆ. ಇದಲ್ಲದೆ, ಹೆಚ್ಚಿನ ಫಲಾನುಭವಿಗಳು ಸಾಕ್ಷರರು (ಶೇ. 86.7 ರಷ್ಟು) ಎಂದು ಕಂಡುಬಂದಿದೆ. ಫಲಾನುಭವಿಗಳಲ್ಲಿ ಪ್ರಮುಖ ಪ್ರಾಥಮಿಕ ಉದ್ಯೋಗವೆಂದರೆ ಆನ್–ಫಾರ್ಮ್ ಚಟುವಟಿಕೆ (ಕೃಷಿ ಆಧಾರಿತ: ಶೇ. 93.2 ರಷ್ಟು) ಮತ್ತು ಉಳಿದವರು ಆಫ್–ಫಾರ್ಮ್ (ಕೃಷಿ ಹೊರತು ಪಡಿಸಿದ) ಚಟುವಟಿಕೆಗಳನ್ನು ಅವಲಂಬಿಸಿರುತ್ತಾರೆ.

**ಪಶು ಭಾಗ್ಯ ಯೋಜನೆಯ ಅರಿವು:** ಪಶುಭಾಗ್ಯ ಯೋಜನೆಯ ಪ್ರಮುಖ ಮತ್ತು ಪ್ರಾಥಮಿಕ ಮಾಹಿತಿಯ ಮೂಲಗಳು ಸರ್ಕಾರಿ ಇಲಾಖೆಗಳು (ಶೇ. 26.1 ರಷ್ಟು) ನಂತರ ನೆರೆಯ ರೈತರು (ಶೇ. 23.6 ರಷ್ಟು) ಮತ್ತು ಗ್ರಾಮ ಪಂಚಾಯಿತಿಗಳು (ಶೇ. 17.6 ರಷ್ಟು) ಎಂಬ ಅಂಶವನ್ನು ಅಧ್ಯಯನವು ಬಹಿರಂಗಪಡಿಸುತ್ತದೆ(ಅಂಶ ಅಧ್ಯಯನದಿಂದ ತಿಳಿದುಬಂದಿದೆ) . ಇದಲ್ಲದೆ, ಒಟ್ಟು ಫಲಾನುಭವಿಗಳಲ್ಲಿ ಕೇವಲ (ಕೇವಲ)23.8 ಪ್ರತಿಶತದಷ್ಟು ಜನರು ಯೋಜನೆಯಡಿಲ್ಲಿ ಫಲಾನುಭವಿಗಳ ಆಯ್ಕೆ ವಿಧಾನದ ಬಗ್ಗೆ ತಿಳಿದುಕೊಂಡಿದ್ದಾರೆ ಮತ್ತು ಜಾನುವಾರುಗಳನ್ನು ಅಳವಡಿಸಿಕೊಳ್ಳಲು ಪ್ರಮುಖ ಕಾರಣವೆಂದರೆ ಸಹಾಯಧನದ ಲಭ್ಯತೆ (ಶೇ. 31.1 ರಷ್ಟು) ಎಂಬ ವಿಷಯ ಈ ಅಧ್ಯಯನದಿಂದ ತಿಳಿದುಬರುತ್ತದೆ.

**ಹೂಡಿಕೆ ಮತ್ತು ಸಹಾಯ ಧನ ವಿತರಣೆ:** ಬಹುಪಾಲು ಮಾದರಿ ಫಲಾನುಭವಿಗಳು (ಶೇ. 81.7 ರಷ್ಟು) ಸಹಾಯ ಧನ ಮತ್ತು ಸಾಲದ ಮಾದರಿಯ ವಿವರಗಳ ಬಗ್ಗೆ ತಿಳಿದುಕೊಂಡಿದ್ದಾರೆ. ಸುಮಾರು 35.8 ರಷ್ಟು ಫಲಾನುಭವಿಗಳು ಅರ್ಜಿ ಸಲ್ಲಿಸಿದ 3 ರಿಂದ 6 ತಿಂಗಳೊಳಗೆ ಸಹಾಯಧನವನ್ನು ಪಡೆದುಕೊಡಿಂದ್ದಾರೆ ಎಂದು ವ್ಯಕ್ತಪಡಿಸಿದರು ಮತ್ತು ಸಹಾಯ ಧನ ಮೊತ್ತವನ್ನು ನೇರವಾಗಿ ಅವರ(ಫಲಾನಭವಿ) ಬ್ಯಾಂಕ್ ಖಾತೆಗೆ (ಶೇ. 94.4 ರಷ್ಟು) ಜಮಾ ಮಾಡಲಾಗಿದೆ ಎಂದು ವರದಿ ಮಾಡಿದ್ದಾರೆ. ಪಡೆದ ಸಾಲದ ಮರುಪಾವತಿ ಗಮನಿಸಿದಾಗ ಕ್ರಮಬದ್ಧವಾಗಿ ಹಂದಿ ಸಾಕಣೆ, ಹಸು/ಎಮ್ಮೆ, ನಂತರ ಕುರಿ/ಮೇಕೆ ಮತ್ತು ಕೋಳಿ ಫಲಾನುಭವಿಗಳು ಸಾಲದ ಹೆಚ್ಚಿನ ಮರುಪಾವತಿ ಮಾಡಲಾಗಿದೆ ಎಂದು ಅಧ್ಯಯನದ ವಿಶ್ಲೇಷಣೆ ತೋರಿಸಿದೆ.

**ಜಾನುವಾರು ಘಟಕದ ಸ್ಥಿತಿ:** ಒಟ್ಟು ಫಲಾನುಭವಿಗಳ ಪೈಕಿ ಗರಿಷ್ಠ 88 ಪ್ರತಿಶತದಷ್ಟು ಹಸು/ಎಮ್ಮೆ ಫಲಾನುಭವಿಗಳಲ್ಲಿ ಜಾನುವಾರುಗಳು ತಮ್ಮ ದೇಹಕ್ಕೆ ಯು.ಐ.ಡಿ ಸಂಖ್ಯೆಗಳನ್ನು ಹೊಂದಿದ್ದು, ಕುರಿ/ಮೇಕೆಗಳಲ್ಲಿ ಇದು ಕೇವಲ ಶೇ. 48 ರಷ್ಟು, ಹಂದಿಯಲ್ಲಿ ಶೇ. 45 ರಷ್ಟು ಮತ್ತು ಕೋಳಿಗಳಲ್ಲಿ ಶೇ. 21 ರಷ್ಟು ಗಮನಿಸಲಾಗಿದೆ. ವಿಮೆ ಮಾಡಿಸಿದ ಅಂಶವನ್ನು ವಿಶ್ಲೇಷಸಿದಾಗ ಹಸು/ಎಮ್ಮೆಗಳಲ್ಲಿ (ಶೇ. 36.2 ರಷ್ಟು), ಅತ್ಯಧಿಕವಾಗಿದೆ ಕುರಿ/ಮೇಕೆಗಳಲ್ಲಿ (ಶೇ. 31.1 ರಷ್ಟು), (ಹಂದಿ ಸಾಕಣೆ (ಶೇ. 24.5 ರಷ್ಟು) ಯಲ್ಲಿ ಮತ್ತು ಕೋಳಿ ಫಲಾನುಭವಿಗಳು (ಶೇ. 23.1 ರಷ್ಟು) ವಿಮಾ ರಕ್ಷಣೆ ಮಾಡಿರುವುದು ಸ್ಪಷ್ಟಪಡಿಸುತ್ತವೆ.

**ಅನುಷ್ಠಾನದ ನಂತರದ ಸೇವೆಗಳು:** ಬಹುಪಾಲು ಹಂದಿ ಸಾಕಾಣಿಕೆ ಫಲಾನುಭವಿಗಳು (ಶೇ. 90.9 ರಷ್ಟು) ಅವರು ಗರಿಷ್ಠ ಸೇವೆಗಳನ್ನು ಪಡೆದಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ನಂತರ ಹಸು/ಎಮ್ಮೆಗಳು (ಶೇ. 76 ರಷ್ಟು), ಕೋಳಿ (ಶೇ. 76.3 ರಷ್ಟು) ಮತ್ತು ಕುರಿ/ಆಡುಗಳು (ಶೇ. 76.3 ರಷ್ಟು) ಫಲಾನುಭವಿಗಳು ಅನುಷ್ಠಾನದ ನಂತರದ ಸೇವೆಗಳು ಪಡೆದಿದ್ದಾರೆ ಎಂದು ತಿಳಿದುಬರುತ್ತದೆ. ಅದರಂತೆ, ಅನುಷ್ಠಾನದ ನಂತರದ ಸೇವೆಗಳನ್ನು ಇಲಾಖೆಯಿಂದ 15 ದಿನಗಳಿಂದ 1 ತಿಂಗಳ (ಶೇ. 80.2 ರಷ್ಟು ಫಲಾನುಭವಿಗಳು) ಸಮಯದೊಳಗೆ ನಿಡಲಾಗಿದೆ ಎಂದು ವ್ಯಕ್ತಪಡಿಸಿದ್ದಾರೆ. ಪಶುವೈದ್ಯಕೀಯ ಆಸ್ಪತ್ರೆ ಸೇವೆಗಳಿಗೆ ಫಲಾನುಭವಿಗಳು ಉತ್ತಮ ಸಂಪರ್ಕವನ್ನು ಹೊಂದಿದ್ದಾರೆ (ಶೇ. 90.1 ರಷ್ಟು ಫಲಾನುಭವಿಗಳು) ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ.

**ಮೇವು ಮತ್ತು ಮಾರುಕಟ್ಟೆ ಸೌಲಭ್ಯ:** ಹೆಚ್ಚಿನ ಫಲಾನುಭವಿಗಳು (ಶೇ.79.8 ರಷ್ಟು) ಮೇವಿನ ಸೌಲಭ್ಯ ಮಧ್ಯಮವಾಗಿದೆ ಎಂದು ವ್ಯಕ್ತಪಡಿಸಿದ್ದಾರೆ. ಜಾನುವಾರಗಳ ನಿರ್ವಹಣೆ ಮತ್ತು ಮೇವಿನ ಕೊರತೆಯಿಂದಾಗಿ ಬೇಸಿಗೆಯಲ್ಲಿ ಹಸು/ಎಮ್ಮೆಗಳ ಅತಿ ಹೆಚ್ಚು ಮಾರಾಟವಾದರೆ. ಕೋಳಿ ಮಾರಾಟವು ಮಾರುಕಟ್ಟೆಯಲ್ಲಿನ ಬೇಡಿಕೆಯಮೆಲೆ ಅವಲಂಬಿಸಿದೆ ಮತ್ತು ಹಂದಿಯಗಳನ್ನು ಸಾಮಾನ್ಯವಾಗಿ ಮುಂಗಾರು ಋತುವಿನಲ್ಲಿ ಮಾರಾಟ ಮಾಡಲಾಗುತ್ತದೆ. ಹಂದಿಗಳ ಮಾರಾಟ ಮತ್ತು ಖರೀದಿಯು ಸಾಮಾನ್ಯವಾಗಿ ಸ್ಥಳೀಯ ಮಾರುಕಟ್ಟೆಗಳಲ್ಲಿ ನಡೆಯುತ್ತದೆ, ಆದರೆ ಜಾನುವಾರು ಉತ್ಪನ್ನಗಳ ಮಾರಾಟವು ಹಳ್ಳಿಯೊಳಗೆ ವ್ಯಾಪಾರಿಗಳ ಮೂಲಕ ನಡೆದಿರುವದು ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

## ಪಶು ಭಾಗ್ಯ ಯೋಜನೆಯ ಪರಿಣಾಮ

### ಮುಖ್ಯ ಮತ್ತು ಉಪ ಉತ್ಪನ್ನದ ಉತ್ಪಾದನೆ, ಉತ್ಪಾದಕತೆ, ಬಳಕೆ ಮತ್ತು ಮಾರಾಟ

**ಹಸು/ಎಮ್ಮೆ:** ಯೋಜನೆ ಅಳವಡಿಕೆಯ ನಂತರ, ಪ್ರತಿ ಕೃಷಿಕರ (ಫಲಾನುಭವಿಗಳ) ಮನೆಯಲ್ಲಿ ಪ್ರಾಣಿಗಳ ಸಂತತಿಯಲ್ಲಿ ಹೆಚ್ಚಾಗಿದ್ದು ಅಧ್ಯಯನದಿಂದ ತಿಳಿದುಬರುತ್ತದೆ, ಇದರ ಪರಿಣಾಮವಾಗಿ ಹಾಲಿನ ಸರಾಸರಿ ಉತ್ಪಾದನೆ ದಿನಕ್ಕೆ 6.13 ರಿಂದ 18.59 ಲೀ ವರೆಗಿನ ಹೆಚ್ಚಳ, ಸರಾಸರಿ ಮಾರಾಟದಲ್ಲಿ 5.42 ರಿಂದ 17.4 ಲೀ ಹೆಚ್ಚಳವಾಗಿದೆ ಎಂದು ವ್ಯಕ್ತಪಡಿಸಿದ್ದಾರೆ. ಅದರಂತೆ ಶೇ. 15.91 ರಷ್ಟು ಹಾಲಿನ ಉತ್ಪಾದಕತೆ ಫಲಾನುಬವಿಗಳ ಮನೆಯ ಹಾಲಿನ ಬಳಕೆಯಲ್ಲಿ 0.71 ರಿಂದ 1.71 ಲೀ/ದಿನಕ್ಕೆ ಹೆಚ್ಚಳವಾಗಿದೆ.

ಸಗಣಿ ಗೊಬ್ಬರ (FYM) ಉತ್ಪಾದನೆ 3.3 ರಿಂದ 15.42 ಟನ್/ಮನೆಗೆ ಮತ್ತು ಅದರ ಮಾರಾಟದಲ್ಲಿ 0.95 ರಿಂದ 4.15 ಟನ್/ಮನೆಗೆ ಹೆಚ್ಚಳವಾಗಿದ್ದು ಕಾಣಬಹುದು. ಅಧ್ಯಯನದ ಪ್ರದೇಶದಲ್ಲಿನ, ಪ್ರತಿ ಕೃಷಿ ಕುಟುಂಬವು ಪ್ರತಿ ವರ್ಷ ಸರಾಸರಿ 2 ಟನ್ ಸಗಣಿ ಗೊಬ್ಬರವನ್ನು ಸರಾಸರಿ ರೂ. 1500/ಟನ್ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಹೆಚ್ಚುವರಿ ಸಗಣಿ ಗೊಬ್ಬರ ಉತ್ಪಾದನೆ ಅವರ ಸ್ವಂತ ಕೃಷಿ ಭೂಮಿಯಲ್ಲಿ ಅದರ ಬಳಕೆ ಮಾಡಲು ಪ್ರಚೋದಿಸಿದೆ ಎಂದು ಕಂಡುಬಂದಿದೆ.

**ಕುರಿ/ಮೇಕೆ:** ಯೋಜನೆ ಅಳವಡಿಸಿಕೊಳ್ಳಲಾದ ಪ್ರತಿ ಫಲಾನುಭವಿಗಳ ಮನೆಯಲ್ಲಿ ಸರಾಸರಿ ಪ್ರಾಣಿಗಳ ಸಂಖ್ಯೆ 1.61 ರಿಂದ 9.94 ಹೆಚ್ಚಾಗಿರುವದು, ಮಾಂಸದ ಉತ್ಪಾದನೆ 43.27 ರಿಂದ 287.21 ಕೆಜಿ/ವರ್ಷ/ಮನೆಯಲ್ಲಿ ಹೆಚ್ಚಳ. ಸರಾಸರಿ ಉತ್ಪಾದಕತೆ ಶೇ. 7.48 ರಷ್ಟು ಹೆಚ್ಚಳ, ಮಾರಾಟ 13.60 ರಿಂದ 187.35 ಕೆಜಿ ಮತ್ತು ಮಾಂಸ ಸೇವನೆಯಲ್ಲಿ ಶೇ. 34.12 ರಷ್ಟು ಹೆಚ್ಚಳ. ಅದರಂತೆ ಕುರಿ/ಮೇಕೆಗಳ ಗೊಬ್ಬರ ಉತ್ಪಾದನೆ ಮತ್ತು ಅದರ ಬಳಕೆಯಲ್ಲಿ ಹೆಚ್ಚಾಗಿರುವದು ಕಾಣಬಹುದು.

**ಕೋಳಿ ಸಾಕಾಣಕೆ:** ಪಶುಭಾಗ್ಯ ಯೋಜನೆಯಲ್ಲಿ ಫಲಾನುಭವಿಗಳು ಅಳವಡಿಸಿದ ಕೋಳಿ ಸಾಕಾಣಿಕೆಯಿಂದ 45 ದಿನಗಳಲ್ಲಿ ಕೋಳಿಗಳ ಸಂಖ್ಯೆ ಪ್ರತಿ ಮನೆಗೆ ಸರಾಸರಿ 2.26 ರಿಂದ 140 ಕ್ಕೆ ಹೆಚ್ಚಳವಾಗಿರುವದು ಕಾಣಬಹುದು, ಇದರಿಂದ ಮಾಂಸದ ಉತ್ಪಾದನೆ 5.60 ಕೆಜಿ ಯಿಂದ 362.21 ಕೆಜಿಗೆ ಏರಿಕೆಯಾಗಿದೆ, ಉತ್ಪಾದಕತೆ ಶೇ. 4 ರಷ್ಟು ಹಾಗೂ ಮಾಂಸದ ಮಾರಾಟ 2.80 ಕೆಜಿ ಯಿಂದ 140 ಕೆಜಿ ವರೆಗೆ ಹೆಚ್ಚಳವಾಗಿದೆ. ಮಾಂಸದ ಕೂಡ 2.80 ರಿಂದ 3.5 ಕೆಜಿ ಹೆಚ್ಚಾಗಿರುವದು ಕಾಣಬಹುದು. ಅದೇ ರೀತಿ 45 ದಿನಗಳಲ್ಲಿ ಮೊಟ್ಟೆಯ ಉತ್ಪಾದನೆ 75.3 ರಿಂದ 563.3 ಸಂಖ್ಯೆಯ ಏರಿಕೆ ಮತ್ತು ಉತ್ಪಾದಕತೆ ಶೇ. 17.24 ರಷ್ಟು ಹೆಚ್ಚಾಗಿರುವದು

ಫಲಾನುಭವಿಗಳಲ್ಲಿ ಸಂತೋಷ ತಂದಿದೆ. ಇದರಿಂದ ಫಲಾನುಭವಿಗಳ ಮನೆಗಳಲ್ಲಿ, ಮೊಟ್ಟೆಯ ಬಳಕೆ 47 ರಿಂದ 58.90 ಮೊಟ್ಟೆಗಳವರೆಗೆ ಹೆಚ್ಚಳವಾಗಿದೆ.

**ಹಂದಿ ಸಾಕಾಣಕೆ:** ಪ್ರತಿ ಕುಟುಂಬದಲ್ಲಿ ಸರಾಸರಿ ಸಾಕು ಹಂದಿಗಳ ಸಂಖ್ಯೆ 0.89 ರಿಂದ 29.22 ಕ್ಕೆ ಎರಿದರೆ ಹಂದಿಮಾಂಸ ಉತ್ಪಾದನೆ 72 ಕೆಜಿ ಯಿಂದ 2635 ಕೆಜಿ/ವರ್ಷ/ಮನೆ ವರೆಗೆ ಹೆಚ್ಚಾಗಿದ್ದು ಮಾರಾಟ 56.8 ಇಂದ 2613 ಕೆಜಿ/ವರ್ಷ/ಮನೆ ಹೆಚ್ಚಾಗಿದ್ದು ಮತ್ತು ಉತ್ಪಾದಕತೆ ಶೇಕಡ 12.39 ರಷ್ಟು ಹೆಚ್ಚಾಗಿದೆ

ಪ್ರತಿ ಕುಟುಂಬದಲ್ಲಿ ಸರಾಸರಿ ಸಾಕು ಹಂದಿಗಳ ಸಂಖ್ಯೆ 0.89 ರಿಂದ 29.22 ಕ್ಕೆ ಎರಿದರೆ ಫಲಾನುಭವಿ ಕುಟುಂಬಗಳಲ್ಲಿ ಸರಾಸರಿ ಹಂದಿಮಾಂಸ ಸೇವನೆಯು 15.1 ರಿಂದ 22.5 ಕೆಜಿ/ವರ್ಷ/ಮನೆಗೆ ಹೆಚ್ಚಾಗಿರುವದು ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಿದೆ. ಫಲಾನುಭವಿಗಳಲ್ಲದ ಕುಟುಂಬಗಳಲ್ಲಿ ಸೇವಿಸುವ ಸರಾಸರಿ ಮಾಂಸವು ಪ್ರತಿ ವರ್ಷ 19.5 ಕೆಜಿ ಆಗಿರುತ್ತದೆ.

**ರಾಸಾಯನಿಕ ಗೊಬ್ಬರ ಬಳಕೆಯಲ್ಲಿ ಕಡಿತ:** ಈ ಯೋಜನೆಯು ಫಲಾನುಭವಿಗಳ ಕೃಷಿ ಭೂಮಿಯಲ್ಲಿ ಜಾನುವಾರುಗಳ ಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆಗೆ ಕಾರಣವಾಗಿದೆ ಎಂದು ಅಧ್ಯಯನದ ಫಲಿತಾಂಶಗಳು ಸೂಚಿಸಿವೆ, ಯೋಜನೆ ಅಳವಡಿಸಿಕೊಂಡ ನಂತರ ಫಲಾನುಭವಿಗಳು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಗಣನೀಯಾವಾಗಿ ಕಡಿಮೆ ಮಾಡಿರುವದಲ್ಲಿದೆ ಮತ್ತು ಫಲಾನುಭವಿಗಳಲ್ಲದವರನ್ನು ಹೋಲಿಸಿದರೆ ಫಲಾನುಭವಿಗಳಿಲ್ಲಿ ರಾಸಾಯನಿಕ ಗೊಬ್ಬರಗಳ(ಬಳಕೆ) ಗಣನೀಯವಾಗಿ ಇಳಿತವಾನ್ನು ಕಾಣಬಹುದು.

**ಕೃಷಿ ಬೆಳೆಗಳ ಉತ್ಪಾದನೆ:** ಯೋಜನೆಯ ಅಳವಡಿಕೆಯ ನಂತರ, ಕಡಲೆ ಉತ್ಪಾದಕತೆ ಶೇ. 41.1 ರಷ್ಟು (9.5 ರಿಂದ 13.4 ಕ್ವ್ಯಾ/ಎಕರೆಗೆ), ಶೇಂಗಾ ಶೇ. 23.5 ರಷ್ಟು (8.3 ರಿಂದ 10.5 ಕ್ವ್ಯಾ/ಎಕರೆಗೆ), ಭತ್ತವು ಶೇ. 14.1 ರಷ್ಟು (35 ಕ್ವ್ಯಾ/ಎಕರೆ ಯಿಂದ 40 ಕ್ವ್ಯಾ/ಎಕರೆವರೆಗೆ) ಹೆಚ್ಚಾಗಿರುವದು ಕಾಣಬಹುದು. ಫಲಾನುಭವಿಗಳಲ್ಲದವರಿಗೆ ಹೋಲಿಸಿದರೆ, ಹೆಚ್ಚಿನ ಫಲಾನುಭವಿಗಳಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದಕತೆ ಹೆಚ್ಚಾಗಿರುತ್ತದೆ.

ಉದ್ಯೋಗ: ಪಶುಭಾಗ್ಯ ಯೋಜನೆ ಅಳವಡಿಸಿಕೊಂಡ ನಂತರ ಫಲಾನುಭವಿ ರೈತರಲ್ಲಿ ಉದ್ಯೋಗವಕಾಶ ಗಣನೀಯವಾಗಿ ಹೆಚ್ಚಾಗಿರುವದು ಸಾಮಾನ್ಯವಾಗಿ ಕಾಣಬಹುದು. ಫಲಾನುಭವಿಗಳಿಗಿಂತ ಫಲಾನುಭವಿಗಳಲ್ಲದವರಲ್ಲಿ ಉದ್ಯೋಗ ಸೃಷ್ಟಿಯು ತುಲನಾತ್ಮಕವಾಗಿ ಕಡಿಮೆಯಾಗಿದು ಕಡಿಮೆ ಸಂಖ್ಯೆಯ ಜಾನುವಾರು ಘಟಕಗಳ ಕಾರಣದಿಂದಾಗಿ.

**ಜಾನುವಾರುಗಳಿಂದ ಪಡೆದ ಆದಾಯ:** ಫಲಾನುಭವಿಗಳ ಕುಟುಂಬದ ಆದಾಯವು ಹಸು/ಎಮ್ಮೆ ಫಲಾನುಭವಿಗಳಲ್ಲಿ ಶೇ. 28.1 ರಷ್ಟು, ಕುರಿ/ಮೇಕೆಗಳಲ್ಲಿ ಶೇ.30.7, ಕೋಳಿಗಳಲ್ಲಿ ಶೇ. 28.2 ಮತ್ತು ಹಂದಿ ಸಾಕಾಣಿಕೆಯಿಂದ ಶೇ.19.3 ರಷ್ಟು ಹೆಚ್ಚಾಗಿದೆ ಎಂದು ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಿದೆ. ಯೋಜನೆಯನ್ನು ಅಳವಡಿಸಿಕೊಳ್ಳುವ ಮೊದಲು ರೈತರ ಒಟ್ಟು ಆದಾಯಕ್ಕೆ ಜಾನುವಾರು ಆದಾಯದ ಕೊಡುಗೆ ಸುಮಾರು 31 ಪ್ರತಿಶತದಷ್ಟು ಕಂಡುಬಂದರೆ, ಇದು ಯೋಜನೆಯನ್ನು ಅಳವಡಿಸಿಕೊಂಡ ನಂತರ 36 ಪ್ರತಿಶತಕ್ಕೆ ಏರಿಕೆಯಾಗಿದೆ.

**ಆರ್ಥಿಕ ಪರಿಣಾಮ:** ಹಸು/ಎಮ್ಮೆ ಉತ್ಪನ್ನಗಳು (ಶೇ. 72.2 ರಷ್ಟು ಫಲಾನುಭವಿ ರೈತರು) ಮತ್ತು ಕುರಿ/ಮೇಕೆ ಉತ್ಪನ್ನಗಳಿಂದ (ಶೇ. 55.5 ರಷ್ಟು ಫಲಾನುಭವಿ ರೈತರು) ಬಂದ ಆದಾಯವನ್ನು ಕೃಷಿ/ಕೃಷಿ ಉಪಕರಣಗಳನ್ನು ಖರೀದಿಸಲು ಬಳಸಲಾಗಿದೆ. ಆದರೆ, ಹಂದಿ ಸಾಕಾಣಿಕೆ ಮತ್ತು ಕೋಳಿ ಸಾಕಣೆಯಿಂದ ಬರುವ ಆದಾಯವು ಜಾನುವಾರುಗಳ ಕೊಟ್ಟಿಗೆ ನಿರ್ಮಾಣದಲ್ಲಿ (ಹಂದಿ ಸಾಕಾಣಿಕೆ/ಮನೆ) ಮತ್ತು ಗೃಹಬಳಕೆಯ ಅಗತ್ಯ ವಸ್ತುಗಳ ಖರೀದಿಗೆ ಸಹಾಯ ಮಾಡಿದೆ. ರೈತರ ವರ್ಗದಲ್ಲಿ ನೋಡುವದಾರೆ, ಮಧ್ಯಮ ಮತ್ತು ದೊಡ್ಡ ರೈತರು, ಜಾನುವಾರುಗಳಿಂದ ಪಡೆದ ಆದಾಯವನ್ನು ಕೃಷಿ/ಕೃಷಿ ಉಪಕರಣಗಳು ಮತ್ತು ಬೆಳೆ ಉತ್ಪಾದನೆಯ ಬೇಕಾಗಿರುವ ವಸ್ತುಗಳನ್ನು ಖರೀದಿಸಲು ಬಳಸಲಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕುರಿ/ಮೇಕೆ ಫಲಾನುಭವಿಗಳಲ್ಲಿ, ಕೃಷಿ ಕುಟುಂಬಗಳು ಕುರಿ/ಮೇಕೆಯಿಂದ ಬಂದ ತಮ್ಮ ಆದಾಯದ ಗರಿಷ್ಠ (ಶೇ. 87.8 ರಷ್ಟು) ಕೃಷಿ/ಕೃಷಿ ಉಪಕರಣಗಳ ಖರೀದಿಗೆ ಖರ್ಚು ಮಾಡಲಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

**ಸಾಮಾಜಿಕ ಮತ್ತು ಇತರ ಪರಿಣಾಮಗಳು:** ಹೆಚ್ಚಿನ (ಶೇ. 57.7 ರಷ್ಟು) ಕೃಷಿ ಕುಟುಂಬಗಳು ಅವರ ಕುಟುಂಬಗಳಿಗೆ ಉತ್ತಮ ಆದಾಯವನ್ನು ಉತ್ಪಾದಿಸುವ ಜಾನುವಾರು ಚಟುವಟಿಕೆಯೆಂದರೆ ಹಸು ಉದ್ಯಮ, ನಂತರ ಕುರಿ/ಮೇಕೆ (ಶೇ. 30.6 ರಷ್ಟು), ಮತ್ತು ಕೋಳಿ (ಅಲ್ಪಾವಧಿಯ ಆದಾಯ) ಮತ್ತು ಹಂದಿ ಸಾಕಣೆ ಶೇ. 2.9 ರಷ್ಟು

ಯೋಜನೆಯ ಅನುಷ್ಠಾನದಿಂದ ಆಹಾರ ಭದ್ರತೆಯನ್ನು ಶೇ. 91.1 ರಷ್ಟು ಕೃಷಿ ಕುಟುಂಬಗಳಲ್ಲಿ ಹೆಚ್ಚಿಸಲು ಸಮರ್ಥವಾಗಿದೆ. ಶೇ. 90.3ರಷ್ಟು ಕೃಷಿ ಕುಟುಂಬಗಳಲ್ಲಿ ವ್ಯವಹಾರ ಸಂಬದಿತ ಮತ್ತು ವ್ಯಾಪಾರ ಚಟುವಟಿಕೆ ಹೆಚ್ಚಸಿದೆ ಇದಲ್ಲದೆ ಕುಟುಂಬದ ಪೌಷ್ಟಿಕಾಂಶದ ಪೂರಕ ಶೇ. 89.7 ರಷ್ಟು ಹೆಚ್ಚಿರುವುದು ಸಹ ಯೋಜನೆಯ ಅಳವಡಿಕೆಗೆ ಮುಖ್ಯ ಕಾರಣಗಳಾಗಿರುತ್ತದೆ.

ಜಾನುವಾರುಗಳ ಸಾಕಣಿಕೆಯಿಂದ ಬರುವ ಆದಾಯವು 20–50 ಪ್ರತಿಶತದಷ್ಟು ಮಕ್ಕಳ ಶಿಕ್ಷಣದ ವೆಚ್ಚಕೆ ಅನೂಕುಲಕಾರವಾಗಿದೆ ಎಂದು 58.9 ಪ್ರತಿಶತ ಕೃಷಿ ಕುಟುಂಬಗಳು ಅಭಿಪ್ರಾಯ ಪಟ್ಟಿದಾರೆ.

ಜಾನುವಾರುಗಳಿಂದ ಬರುವ ಆದಾಯವು ರೈತರಿಗೆ ಹೆಚ್ಚಿನ ಜಾನುವಾರು ಮತ್ತು ಜಾನುವಾರು ಸಂಬಂಧಿತ ಸರಕುಗಳನ್ನು ಖರೀದಿಸಲು ರೈತರ ಮೇಲೆ ಪರಿಣಾಮ ಬೀರಿದೆ ಎಂದು ಕಂಡುಬಂದಿದೆ ಸಗಣೆ ಗೊಬ್ಬರವನ್ನು ಊಪಯೋಗಿಸುವದರ ಮೂಲಕ ಮಣ್ಣಿನ ಆರೋಗ್ಯವನ್ನು ಸುಧಾರಿಸುವಲ್ಲಿ ಪಶುಸಂಗೋಪನೆಯು ಪ್ರಯೋಜನಕಾರಿಯಾಗಿದೆ ಎಂದು ಕೆಲವರು (ಶೇ. 9.9 ರಷ್ಟು) ಅಭಿಪ್ರಾಯಪಟ್ಟಿದ್ದಾರೆ..

**ಕಾರ್ಮಿಕ ವಲಸೆಯಲ್ಲಿ ಕಡೆತ:** ಫಲಾನುಭವಿಗಳಲ್ಲಿ, ಶೇ.73.8 ರಷ್ಟು ಹಸು/ಎಮ್ಮೆ ಫಲಾನುಭವಿಗಳು, ಶೇ. 68.3 ರಷ್ಟು ಕುರಿ/ಮೇಕೆ ಫಲಾನುಭವಿಗಳು, ಶೇ. 67 ಹಂದಿಯ ಫಲಾನುಭವಿಗಳು ಮತ್ತು ಶೇ.59 ಕೋಳಿ ಫಲಾನುಭವಿಗಳ ವಲಸೆಯಲ್ಲಿ ಕಡಿಮೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಫಲಾನುಭವಿ ಕುಟುಂಬಗಳಲ್ಲಿ ಭೂರಹಿತ ಫಲಾನುಭವಿಗಳೇ ಹೆಚ್ಚು ವಲಸೆ ಹೋಗುವುದು ಸಾಮಾನ್ಯ.

**ತರಬೇತಿಗಳು ಮತ್ತು ಸಾಮರ್ಥ್ಯ ವೃದ್ಧಿ:** ಕೇವಲ ಶೇ. 12.7 ರಷ್ಟು ಫಲಾನುಭವಿಗಳು ತರಬೇತಿಗೆ ಹಾಜರಾಗಿರುವುದು ಅಧ್ಯಯನ ಫಲಿತಾಂಶಗಳು ಬಹಿರಂಗಪಡಿಸಿದೆ, ಜಿಲ್ಲಾವಾರು ಫಲಾನುಭವಿಗಳ ಭಾಗವಹಿಸುವಿಕೆಯ ವಿಶ್ಲೇಷಣೆ ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯ ಫಲಾನುಭವಿಗಳು ತರಬೇತಿಯಲ್ಲಿ ಹೆಚ್ಚಿನ ಭಾಗವಹಿಸುವಿಕೆಯನ್ನು ಗಮನಿಸಿದರೆ, ಮಂಡ್ಯದಲ್ಲಿ ಕಡಿಮೆ ಭಾಗವಹಿಸುವಿಕೆಯನ್ನು ಗಮನಿಸಲಾಗಿದೆ. ಫಲಾನುಭವಿಗಳ ಪೈಕಿ ಶೇ.70.7 (188 ರಲ್ಲಿ 133) ಹಸು/ಎಮ್ಮೆ ಫಲಾನುಭವಿಗಳು ತರಬೇತಿಗೆ ಹಾಜರಾಗಿದ್ದಾರೆ, ನಂತರ ಶೇ.19.7 ಕುರಿ/ಮೇಕೆ ನಿರ್ವಹಣೆ, ಕೋಳಿ (ಶೇ. 4.3 ರಷ್ಟು) ಮತ್ತು ಹಂದಿ ಸಾಕಣೆ (ಶೇ. 5.3 ರಷ್ಟು) ತರಬೇತಿಗೆ ಹಾಜರಾಗಿದ್ದಾರೆ. ಭಾಗವಹಿಸಿದ ಹೆಚ್ಚಿನ ತರಬೇತಿ ಹೊಂದಿದ್ದ ಫಲಾನುಭವಿಗಳು ಸಾಮಾನ್ಯ / ಒಬಿಸಿ (ಶೇ. 77.7 ರಷ್ಟು) ವರ್ಗಕ್ಕೆ ಸೇರಿದವರು, ನಂತರ ಪ.ಜಾ ಮತ್ತು ಪ.ಪಂ ಸಮುದಾಯದವರು.

**ಮಧ್ಯಸ್ಥಗಾರರೊಂದಿಗಿನ ಪರಸ್ಪರ ಸಂವಾದ**

**ಇಲಾಖೆಯ ಸಿಬ್ಬಂದಿ:** ಹಸು/ಎಮ್ಮೆಗಾಗಿ ತಳಿ ನೀತಿಯನ್ನು ಅಭಿವೃದ್ಧಿಪಡಿಸಲಾಗಿದೆ. ಆದರೆ, ಕೋಳಿ ಮತ್ತು ಹಂದಿ ಸಾಕಣೆಯ ವಿಷಯದಲ್ಲಿ ಅದೇ ರೀತಿ ಅಭಿವೃದ್ಧಿಪಡಿಸಬೇಕು. ಮಾಂಸದ ಉತ್ಪಾದನೆಯನ್ನು ಹೆಚ್ಚಿಸಲು ಶೇ. 90 ರಷ್ಟು ಕುರಿ/ಆಡುಗಳಲ್ಲಿ ಮತ್ತು ಹಾಲಿನ ಪ್ರಮಾಣ ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಹಸು/ಎಮ್ಮೆಗಳಲ್ಲಿ 50 ಪ್ರತಿಶತದಷ್ಟು ಮಿಶ್ರ ತಳಿಯ ಸಂತಾನೋತ್ಪತ್ತಿಯನ್ನು ಮಾಡಲಾಗುತ್ತಿದ್ದೆ.

2018–19 ರವರೆಗೆ ಫಲಾನುಭವಿಗಳ ಆಯ್ಕೆಯನ್ನು ಲಿಖಿತ ರುಪದಲ್ಲಿ ಮಾಡಲಾಯಿತು. ಆದರೆ 2019 ರಿಂದ, ಇದನ್ನು FRUITS ID ಮೂಲಕ ಆಧರಿಸಿದೆ ಎಂದು ವ್ಯಕ್ತಪಡಿಸಿದ್ದಾರೆ. 2015–16ರಲ್ಲಿ ಜಿಲ್ಲಾಧಿಕಾರಿ ಅಥವಾ

ತಶಿಲ್ದಾರ್ ನೇತೃತ್ವದಲ್ಲಿ ಲಾಟರಿ ಪದ್ಧತಿಯನ್ನು ಅಳವಡಿಸಲಾಗಿತ್ತು. ಅದರೆ 2016–19ನೇ ಸಾಲಿನಲ್ಲಿ ಶಾಸಕ/ಎಂಎಲ್‌ಸಿ ನೇತೃತ್ವದಲ್ಲಿ ತಾಲೂಕು ಮಟ್ಟದ ಆಯ್ಕೆ ಸಮಿತಿ ರಚಿಸಲಾಗಿತ್ತು.

ಚಾಫ್ ಕಟ್ಟರ್ ಖರೀದಿಸುವಲ್ಲಿ ಮತ್ತು ಗೋ ಶಾಲೆಗಳನ್ನು ನಿರ್ಮಿಸುವಲ್ಲಿ ಎಂ ಜಿ ಎನ್ ಆರ್ ಇ ಜಿ ಎ ಯೋಜನೆಗಳೊಂದಿಗೆ ಒಮ್ಮುಖವಾಗಿರುದನ್ನು ಗಮನಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಇಲಾಖೆಯಿಂದ ಸಾಮರ್ಥ್ಯ ನಿರ್ಮಾಣ ತರಬೇತಿಯನ್ನು ನಡೆಸಲಾಗಿದ್ದು, ಸುಮಾರು 20 ರಿಂದ 55 ಪ್ರತಿಶತ ಫಲಾನುಭವಿಗಳು ತರಬೇತಿಯ ಪ್ರಯೋಜನ ಪಡೆದಿದ್ದಾರೆ.

**ಬ್ಯಾಂಕ್ ಸಿಬ್ಬಂದಿ:** ಹಸು/ಎಮ್ಮೆ ಫಲಾನುಭವಿಗಳಲ್ಲಿ 60 ರಿಂದ 80 ಪ್ರತಿಶತದಷ್ಟು ಸಾಲವನ್ನು ಪರಿಣಾಮಕಾರಿಯಾಗಿ ಬಳಸುವುದನ್ನು ಕಂಡುಕೊಂಡರೆ, ಹಂದಿ ಸಾಕಣೆ (75 ರಷ್ಟು), ಕುರಿ/ಮೇಕೆ (ಶೇ. 45–66 ರಷ್ಟು) ಮತ್ತು ಇದು ಕನಿಷ್ಠ ಕೋಳಿ (ಶೇ. 25–45 ರಷ್ಟು) ಫಲಾನುಭವಿಗಳಲ್ಲಿ ಕಾಣಬಹುದಾಗಿದೆ. ಫಲಾನುಭವಿಗಳಲ್ಲಿ ಸಕಾಲಿಕ ಮರುಪಾವತಿ ಮತ್ತು ಸಾಲ ವಸೂಲಾತಿಯು ಹಂದಿ ಸಾಕಾಣಿಕೆ (ಶೇ. 65–80 ರಷ್ಟು), ಹಸು/ಎಮ್ಮೆ (ಶೇ. 60–75 ರಷ್ಟು) ಮತ್ತು ಕುರಿ/ಮೇಕೆ (ಶೇ. 35–50 ರಷ್ಟು) ಮತ್ತು ಕೋಳಿ ಸಾಕಣೆಯಲ್ಲಿ (ಶೇ. 25–45 ರಷ್ಟು) ಕಂಡುಬಂದಿದೆ.

**ಸಾಮಾನ್ಯ ಬ್ಯಾಂಕರ್‌ಗಳ ನಿಡಿದ ಸಲಹೆಗಳು ಹಿಗಿವೆ:** ಯೋಜನೆಯ ಪ್ರಾರಂಭದಿಂದಲೂ ನಿಧಿಯ ಮೇಲ್ವಿಚಾರಣೆ, ಸಾಲ ವಿತರಣೆಗೆ ಆಸ್ತಿಗಳ ಅಡವಿಡುಕೆಯ ಮೂಲಕ ಸಾಲ ಒದಗಿಸುವದು, ಅಗತ್ಯದ ಆಧಾರಿತ ಮೇರೆಗೆ ಫಲಾನುಭವಿಗಳ ಆಯ್ಕೆ, ಡೀಫಾಲ್ಟರ್‌ಗಳನ್ನು ನಿಗ್ರಹಿಸುವುದು ಮತ್ತು ದಾಖಲೆಗಳು/ಬಿಲ್‌ಗಳು ಮತ್ತು ಇತರ ಅಗತ್ಯ ಪುರಾವೆಗಳ ಸ್ವೀಕೃತಿಯ ನಂತರವೇ ಹಣವನ್ನು ಹಂಚಿಕೆ ಮಾಡುವುದು ಸೂಕ್ತ ಎಂದು ಸಲಹೆಗಳನ್ನು ನೀಡಿದರು.

**ವ್ಯಾಪಾರಿಗಳು/ ಮಧ್ಯವರ್ತಿಗಳು:** ಮಾರುಕಟ್ಟೆಯಲ್ಲಿನ ಏರಿಳಿತಗಳಿಂದಾಗಿ, ಜಾನುವಾರು ಉತ್ಪನ್ನಗಳ ಬೆಲೆಯು ಋತು, ಬೇಡಿಕೆ ಮತ್ತು ಲಭ್ಯತೆಯ ಆಧಾರದ ಮೇಲೆ 10 ರಿಂದ 50 ಪ್ರತಿಶತದವರೆಗೆ ಬದಲಾಗುತ್ತದೆ. ಬೇಸಿಗೆಯಲ್ಲಿ ಹಸು/ಎಮ್ಮೆ, ಹಬ್ಬ ಹರಿದಿನಗಳಲ್ಲಿ ಮತ್ತು ಚಳಿಗಾಲದ ನಂತರ ಕುರಿ/ಆಡುಗಳ ಮಾರಾಟವು ಪ್ರಧಾನವಾಗಿತ್ತದೆ, ಆದರೆ ವರ್ಷವಿಡೀ ಕೋಳಿ ಮತ್ತು ಮುಂಗಾರು ಸಮಯದಲ್ಲಿ ಹಂದಿಯ ಮಾಂಸವನ್ನು ಮಾರಾಟ ಮಾಡಲಾಗುತ್ತದೆ. ಸಾರಿಗೆ ಶುಲ್ಕಗಳು, ರೋಗಗಳ ಬೆದರಿಕೆ ಮತ್ತು ಸಾರಿಗೆ ಸಮಯದಲ್ಲಿ ಪ್ರಾಣಿಗಳ ಮರಣದ ಹೆಚ್ಚಳದಿಂದಾಗಿ (ಬೆಲೆ, ಪ್ರವೇಶ, ಮಾರುಕಟ್ಟೆ ರಚನೆಗಳು ಇತ್ಯಾದಿ) ಜಾನುವಾರುಗಳ ವ್ಯಾಪಾರೋದ್ಯಮದಲ್ಲಿ ಪ್ರಮುಖ ಅಡಚಣೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

## ಕೇಂದ್ರೀಕೃತ ಗುಂಪುಗಳ ಚರ್ಚೆಯ ಪ್ರಮುಖ ಸಾರಾಂಶ (ಫೋಕಸ್ ಗ್ರೂಪ್ ಸಭೆ)

ಅಧ್ಯಯನ ಪ್ರದೇಶದಲ್ಲಿನ ಹೆಚ್ಚಿನ ಭೂ ಪ್ರದೇಶವು ಮಳೆಯಾಶ್ರಿತವಾಗಿದೆ (ಶೇ. 60 ರಷ್ಟು), ನಂತರ ನೀರಾವರಿ (ಶೇ. 35 ರಷ್ಟು), ಒಣ ಭೂಮಿ (ಶೇ. 4 ರಷ್ಟು) ಮತ್ತು ಮೇವಿನ/ಹುಲ್ಲುಗಾವಲು ಭೂಮಿ (ಶೇ. 1 ರಷ್ಟು). ಹೆಚ್ಚಿನ ಭೂಗೋಳವು ಸಮತಟ್ಟಾದ ಭೂ ಪ್ರದೇಶವನ್ನು ಹೊಂದಿದೆ, ಆದರೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗುಡ್ಡಗಾಡು ಪ್ರದೇಶವನ್ನು ಗಮನಿಸಬಹುದು. ಸುಮಾರು 65 ಪ್ರತಿಶತ ಕುಟುಂಬಗಳು ಪ್ರಾಣಿಗಳ ಮೇವಿಗೆ ಸಂಬಂಧಿತ ಸಮಸ್ಯೆಗಳನ್ನು ಎದುರಿಸುತ್ತಿದಾರೆ.

ಪಶು ಭಾಗ್ಯ ಯೋಜನೆಯ ಪ್ರಾಥಮಿಕ ಮತ್ತು ಪ್ರಮುಖ ಮಾಹಿತಿಯನ್ನು ಪ.ಪಾ & ಪ. ವೈ. ಸೇವೆಗಳ ಇಲಾಖೆಯಿಂದ (ಶೇ. 78 ರಷ್ಟು), ನಂತರ ನೆರೆಯ ರೈತರು (ಶೇ. 20 ರಷ್ಟು) ಮತ್ತು ಸಮೂಹ ಮಾಧ್ಯಮ (ಟಿವಿ, ಶೇ. 2 ರಷ್ಟು). ಪಡೆಯಲಾಗಿದೆ. ಹೆಚ್ಚಿನ ಕೃಷಿ ಕುಟುಂಬಗಳು ಯೋಜನೆಯಡಿಯಲ್ಲಿ ದೊರೆಯುವ ಸಹಾಯ ಧನ (ಶೇ. 65 ರಷ್ಟು) ಮತ್ತು ಸಾಲದ ಬಗ್ಗೆ (ಶೇ. 62 ರಷ್ಟು) ತಿಳಿದಿರುತ್ತದೆ. ಜಾನುವಾರು ನಿರ್ವಹಣೆಯ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಪ್ರಮುಖವಾಗಿ ಪುರುಷರು (ಶೇ. 58 ರಷ್ಟು) ಮತ್ತು ಮಹಿಳಾ ಸದಸ್ಯರಿಗೆ (ಶೇ. 55 ರಷ್ಟು) ಕೈಯಲ್ಲಿದೆ.

ಗ್ರಾಮದಲ್ಲಿ ಸಹಕಾರಿ/ಸಂಘಗಳು ಮತ್ತು ಹಣಕಾಸು ಸಂಸ್ಥೆಗಳ ಸಂಖ್ಯೆ 1 ರಿಂದ 2 ರವರೆಗೆ ಇರುವದನ್ನು ಗಮನಿಸಬಹುದು. ಸುಮಾರು 45 ಪ್ರತಿಶತ ಕುಟುಂಬಗಳು ಇತರ ಸಮುದಾಯ–ಆಧಾರಿತ ಸಂಸ್ಥೆಗಳ ಸದಸ್ಯರಾಗಿದ್ದಾರೆ. 55 ರಷ್ಟು ಜನರು ಸಾಲ ಮತ್ತು ಸಹಾಯ ಧನ ಪಡೆಯಲು ತೊಂದರೆಯನ್ನು ಅನುಭವಿಸಿದ್ಧಾರೆ ಎಂದು ವರದಿ ಮಾಡಿದ್ದಾರೆ. ಜಾನುವಾರುಗಳಿಂದ ಬರುವ ಆದಾಯವನ್ನು ಸಾಮಾನ್ಯವಾಗಿ ಮನೆಯ ದಿನಸಿ ಖರೀದಿಗೆ (ಶೇ. 68 ರಷ್ಟು), ಶಾಲಾ ವೆಚ್ಚ (ಶೇ. 23 ರಷ್ಟು) ಮತ್ತು ಆರೋಗ್ಯದ (ಶೇ. 9 ರಷ್ಟು) ಸಲುವಾಗಿ ಬಳಸಲಾಗುತ್ತದೆ. ಯೋಜನೆಯ ಅಳವಡಿಕೆಯು ಅನೇಕ ಕುಟುಂಬಗಳಲ್ಲಿ (ಶೇ. 45 ರಷ್ಟು) ವಲಸೆ ಹೊಗುವದನ್ನು ಕಡಿಮೆ ಮಾಡಿದೆ.

ಪ.ಪಾ & ಪ.ವೈ. ಸೇ. ಇಲಾಖೆ ಮತ್ತು ಕೆ,ವಿ,ಕೆ ಗಳು ತರಬೇತಿ ಮತ್ತು ಕ್ಷೇತ್ರ ಪ್ರಾತ್ಯಕ್ಷಿಕೆಗಳನ್ನು ನಡೆಸುವಲ್ಲಿ ತೊಡಗಿಸಿಕೊಂಡಿರುವ ಏಕೈಕ ಸಂಸ್ಥೆಗಳಾಗಿವೆ. ಸುಮಾರು 25 ಪ್ರತಿಶತ ಫಲಾನುಭವಿಗಳು ಹಸು/ಎಮ್ಮೆ, ಕುರಿ/ಮೇಕೆ (ಶೇ. 15 ರಷ್ಟು), ಕೋಳಿ (ಶೇ. 5 ರಷ್ಟು) ಮತ್ತು ಹಂದಿ ಸಾಕಣೆ (ಶೇ. 10 ರಷ್ಟು) ಅಡಿಯಲ್ಲಿ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿದ್ದರು. ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣದಲ್ಲಿ ಪ್ರಮುಖವಾದವುಗಳೆಂದರೆ ಕೌಶಲ್ಯ ಅಭಿವೃದ್ಧಿ (ಶೇ. 45 ರಷ್ಟು) ಮತ್ತು ಜ್ಞಾನ ಪುಷ್ಟೀಕರಣ (ಶೇ. 55 ರಷ್ಟು). ಆದರೆ ಇನ್ನೂ ಹೆಚ್ಚಿನ ಕೃಷಿ ಕುಟುಂಬಗಳು ಜಾನುವಾರುಗಳಿಂದ ಆದಾಯದ ಮೇಲೆ ಪರಿಣಾಮ ಬೀರುವ

ಪ್ರಮುಖ ಸಮಸ್ಯೆಯೆಂದರೆ ಮಾರುಕಟ್ಟೆ ಮೂಲಸೌಕರ್ಯಗಳ ಕೊರತೆ, ಹುಲ್ಲುಗಾವಲು ಭೂಮಿಯ ಕೊರತೆ ಮತ್ತು ಕಳಪೆ ಸಂಘಟಿತ ಮಾರುಕಟ್ಟೆಗಳು ಎಂದು ಅಭಿಪ್ರಾಯಪಟ್ಟಿದ್ದಾರೆ.

**ಶಿಫಾರಸ್ಸುಗಳು**

**ಯೋಜನೆಯ ಅನುಷ್ಠಾನ**

1. ಫಲಾನುಭವಿಗಳ ಆಯ್ಕೆಯು ಆಸಕ್ತಿ ಹಾಗು ಅಗತ್ಯವನ್ನು ಆಧರಿಸಿ ಮೊದಲು ಅರ್ಜಿ ಹಾಕಿದವರಿಗೆ ಆದ್ಯತೆ ನೀಡುವ ಮಾನದಂಡಕ್ಕೆ ಪಾರದರ್ಶಕವಾಗಿರಬೇಕು. ಸುಗಮವಾದ ಅನುಷ್ಠಾನಕ್ಕೆ ಪಶು ಭಾಗ್ಯ ಯೋಜನೆಯನ್ನು ಏಕ ಗವಾಕ್ಷಿ ವಿಧಾನದ ಮೂಲಕ ಜಾರಿಗೊಳಿಸಬೇಕು.
2. ಜಿಯೋ–ಟ್ಯಾಗಿಂಗ್ ಮೂಲಕ ಜಾನುವಾರುಗಳ ಮೇಲ್ವಿಚಾರಣೆ ಮತ್ತು ಜಾಡೀಕರಣ (ಟ್ರ್ಯಾಕಿಂಗ್) ನೈಜ ಸಮಯದ ಮೇಲ್ವಿಚಾರಣೆಗೆ/ ಉಪ ಕ್ರಮಗಳನ್ನು ಅನುಸರಿಸಲು ಮಾಹಿತಿ ತಂತ್ರಜ್ಞಾನ ಸಕ್ರಿಯಗೊಳಿಸಬೇಕು.
3. ಫಲಾನುಭವಿಯ ಆಯ್ಕೆಯಿಂದ ಅನುಷ್ಠಾನಗೊಳ್ಳುವ ಹಂತದವರೆಗೆ ನಿರಂತರವಾಗಿ ಹಣಕಾಸು (ಬ್ಯಾಂಕ್) ಮತ್ತು ವಿಮಾ ಸಂಸ್ಥೆಗಳು ಭಾಗಿಯಾಗಿಯಾಗರಬೇಕು.
4. ಪಶು ಭಾಗ್ಯ ಯೋಜನೆಯನ್ನು ಕೃಷಿ ಭಾಗ್ಯ ಮತ್ತು ಜಾನುವಾರುಗಳ ಮೂಲಸೌಲಭ್ಯ ಕಾರ್ಯಕ್ರಮಗಳೊಂದಿಗೆ ಒಗ್ಗೂಡಿಸುವ ಅಗತ್ಯವಿದೆ ಉದಾ: ಕೋಳಿ ಸಾಕಾಣಿಕೆಯಲ್ಲಿ ಅಗತ್ಯತೆವಿರುವ ಶಕ್ತಿಯನ್ನು ಸೌರ ಶಕ್ತಿ ಕಾರ್ಯಕ್ರಮ, ಗಣಿ ಪ್ರದೇಶ ಅಭಿವೃದ್ಧಿ ನಿಧಿ–ಕೆವಾಲ ಗಣಿಗಾರಿಕೆಯ ಪ್ರದೇಶದಲ್ಲಿ ಯೋಜನೆಯ ಅನುಷ್ಠಾನಗೊಳ್ಳುವ ಸಮಯದಲ್ಲಿ. ಎಂ.ಜಿ.ಎನ್. ಆರ್.ಇ.ಜಿ.ಎ ಯೋಜನೆಯನ್ನು ಮೇವಿನ ತೋಟದ ನಿರ್ಮಾಣ ಹಾಗು ಅದರ ವಿಸ್ತರಣೆ ಸಲುವಾಗಿ.
5. ಜಾನುವಾರು ಕ್ಷೇತ್ರದಲ್ಲಿ ಮುಖ್ಯವಾಗಿ ಕೋಳಿ ಮತ್ತು ಹಂದಿ ಸಾಕಾಣಿಕೆ ಅಭಿವೃದ್ಧಿಗಾಗಿ ತಳಿಯ ಮತ್ತು ಮೇವು ನೀತಿ ಅವಶ್ಯಕತೆಯಿದೆ
6. ಏಕಕಾಲೀನ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ಇಲಾಖೆ (ಆಂತರಿಕ) ಮತ್ತು ಮೂರನೇ ವ್ಯಕ್ತಿಗಳಿಂದ ಕಡ್ಡಾಯವಾಗಿ ಮಾಡಬೇಕಾದ ಅವಶ್ಯಕತೆಯಿದೆ.
7. ಜಾನುವಾರು ಆಂಬ್ಯುಲೆನ್ಸ್ ಸೇವೆಯನ್ನು ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭಿಸಬೇಕಾಗಿದೆ. ವಿಶೇಷವಾಗಿ ರಾಯಚೂರು, ಬೀದರ್ ಮತ್ತು ವಿಜಯಪುರ ಜಿಲ್ಲೆಯಲ್ಲಿ ತುರ್ತು ಆಧಾರದ ಮೇಲೆ ಪ್ರಾರಂಭಿಸಬೇಕಾಗಿದೆ. ಇದಲ್ಲದೆ, ಜಾನುವಾರುಗಳ ಆರೋಗ್ಯ ಮತ್ತು ಅದರ ಉತ್ಪಾದಕತೆಯನ್ನು ಸುಧಾರಿಸಲು ಇತ್ತೀಚೆಗೆ ಸ್ಥಾಪಿಸಲಾದ ಪ್ರಾಣಿ ಕಲ್ಯಾಣದ ಯುದ್ಧ ಕೊಠಡಿಯನ್ನು ಜಾನುವಾರು ಸಾಕಣೆದಾರರು ಹಾಗು ಹೈನುಗಾರರಿಗೆ ಸಮುದಾಯಕ್ಕೆ ತಲುಪಲು ಮುಂದುವರಿಸುವದು ಅಗತ್ಯವಿದೆ.

8. ಅಸಂಘಟಿತ ಮಾರುಕಟ್ಟೆಗಳನ್ನು (ಏಜೆಂಟರು/ಡೀಲರ್‌ಗಳು) ನಿಯಂತ್ರಿಸಲು ಸಂಸ್ಥೆಯ ಕಾರ್ಯ ನೀತಿಯನ್ನು ಅಭಿವೃದ್ಧಿಪಡಿಸುವುದು.
9. ಮಾರುಕಟ್ಟೆ ಬೆಲೆಗಳಲ್ಲಿನ ಬದಲಾವಣೆಗಳ ಆಧಾರದ ಮೇಲೆ ವರ್ಷಕ್ಕೊಮ್ಮೆ ಘಟಕದ ವೆಚ್ಚವನ್ನು ಪರಿಷ್ಕರಿಸಬೇಕು.
10. ಜಾನುವಾರುಗಳ ಆರೋಗ್ಯದ ಅಪಾಯವನ್ನು ಕಡಿಮೆ ಮಾಡಲು ಜಾನುವಾರುಗಳಿಗೆ ಬ್ಯಾಂಕ್‌ಗಳ ಮೂಲಕ ಪಶು ವಿಮೆಯನ್ನು ಕಡ್ಡಾಯಗೊಳಿಸಬೇಕು.
11. ಕುರಿ/ಮೇಕೆಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕೊಟ್ಟಿಗೆ ನಿರ್ಮಾಣ ಭೂ ರಹಿತ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ರೈತರು, ವಿಧವೆಯರು, ಸಂಕಷ್ಟದಲ್ಲಿರುವ ಮಹಿಳೆಯರಿಗೆ ಇದರ ಹೆಚ್ಚಿನ ಅವಶ್ಯಕತೆ ಇದೆ.
12. ಪ್ರಾಣಿಗಳ ಆರೋಗ್ಯವನ್ನು ಸುಧಾರಿಸಲು, ಫಲಾನುಭವಿಗಳಿಗೆ ಕೇಂದ್ರೀಕೃತ ಆಹಾರ, ಮೇವು ಮತ್ತು ಪಶುಪಾಲನೆಯ ಬಗ್ಗೆ ತೀವ್ರವಾದ ತರಬೇತಿಯನ್ನು ನೀಡಬೇಕು.
13. ಬೆಂಬಲ ಸೇವೆಗಳು, ಜಾಗೃತಿ ಮತ್ತು ಸಾಮರ್ಥ್ಯ ವರ್ಧನೆಯನ್ನು ಕ್ರಮಬದ್ಧವಾಗಿ ಒದಗಿಸಬೇಕು.
14. ಕಾರ್ಯಕ್ರಮದ ಮಾಹಿತಿಯನ್ನು ವ್ಯಾಪಕವಾಗಿ ಹರಡಲು ಮಾಹಿತಿ ತಂತ್ರಜ್ಞಾನ ಪರಿಕರಗಳನ್ನು ಬಳಸಬೇಕು
15. ಪರಿಣಾಮಕಾರಿ ಅನುಷ್ಠಾನ ಮತ್ತು ಯೋಜನೆಯನ್ನು ವ್ಯಾಪಕವಾಗಿ ವಿಸ್ತರಿಸಲು ಸಮರ್ಪಕ ಸಂಸ್ಥೆಯ (ಸಿಬ್ಬಂದಿ) ಸ್ಥಾಪನೆಯ ಅಗತ್ಯವಿದೆ.
16. ಉತ್ತಮವಾಗಿ ಜಾನುವಾರುಗಳ ಸಾಕಣೆ ಮಾಡುವ ರೈತರನ್ನು ಪ್ರೋತ್ಸಾಹಿಸುವ ಮೂಲಕ ಸಮುದಾಯದ ಸಹಭಾಗಿತ್ವವನ್ನು ಉತ್ತೇಜಿಸಿಬೆಕು.
17. ಜಾನುವಾರು ನಿರ್ವಹಣೆ, ಹೊಸದಾದ ತಂತ್ರಜ್ಞಾನಗಳು ಮತ್ತು ಉತ್ತಮ ಪಾಲನೆ ಕುರಿತು ಫಲಾನುಭವಿಗಳಿಗೆ ಸ್ಥಳೀಯ ಭಾಷೆಯಲ್ಲಿ ಕರಪತ್ರಗಳನ್ನು ಕಡ್ಡಾಯವಾಗಿ ವಿತರಿಸುವುದು.
18. ಉತ್ಪನ್ನದ ಮೌಲ್ಯವರ್ಧನೆಯ ಕುರಿತು ತರಬೇತಿಯನ್ನು ಆಯೋಜಿಸುವುದು, ಜಾನುವಾರು ನಿರ್ವಹಣೆ ಮತ್ತು ಉತ್ಪನ್ನಗಳ ಮೇಲೆ ಮುದ್ರೆಹಾಕುವುದರ ಮೂಲಕ ಬೆಂಬಲ ನಿಡುವದು (ಫಾರ್ಮರ್ ತಾಜಾ–ಹಾಲು/ಮೊಟ್ಟೆ/ಮಾಂಸ).
19. ಇಲಾಖೆಯ ವಿಸ್ತರಣಾ ಸಿಬ್ಬಂದಿಗಳು ಮೇವು ಉತ್ಪಾದನೆ, ಸಮಯಾನುಸಾರ ಸಮಸ್ಯೆಗಳು ಮತ್ತು ಜಾನುವಾರುಗಳ ನಿರ್ವಹಣೆಯ ಕುರಿತು ಪುನಶ್ಚೇತನದ ಅಧ್ಯಯನ ಮತ್ತು ಕ್ಷೇತ್ರ ಭೇಟಿಗಳಿಗೆ' ಒಳಗಾಗಬೇಕಾಗಿದೆ.

**ಮೇವು ಲಭ್ಯತೆ**

1. ಕರ್ನಾಟಕದ 22 ಜಿಲ್ಲೆಗಳಲ್ಲಿ ಗೋ ಶಾಲೆಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. ಉಳಿದ ಜಿಲ್ಲೆಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ) ಮಾದರಿಯ ಗೋ ಶಾಲೆಯನ್ನು ಉತ್ತೇಜಿಸಬೇಕು
2. ಮೇವಿನ ಭದ್ರತೆಯನ್ನು ಉತ್ತೇಜಿಸಲು ತುರ್ತಾಗಿ ನೈಸರ್ಗಿಕ ಹುಲ್ಲುಗಾವಲು/ಕಾವಲ್/ಗ್ರಾಮ ಹುಲ್ಲುಗಾವಲುಗಳನ್ನು ಸಂರಕ್ಷಿಸುವುದು ಮತ್ತು ಜಿಲ್ಲಾ ಮಟ್ಟದಲ್ಲಿ (ಕಲ್ಯಾಣ ಕರ್ನಾಟಕದಲ್ಲಿ) ಮೇವಿನ ಕಣಜಗಳನ್ನು ತೆರೆಯುವುದು ಅಗತ್ಯವಾಗಿದೆ.
3. ಬೇಸಿಗೆಯ ಅವಧಿಯಲ್ಲಿ ಕಡಿಮೆಯಾಗುತ್ತಿರುವ ಹಸಿರು ಹುಲ್ಲು ಸರಬರಾಜು ಹಾಗು ಕುಗ್ಗುತ್ತಿರುವ / ಕ್ಷೀಣಿಸುತ್ತಿರುವ,ಹುಲ್ಲುಗಾವಲುಗಳನ್ನು ಉಷ್ಣವಲಯದ ಹುಲ್ಲುಗಾವಲುಗಳ ಗುರುತಿಸುವ ಮೂಲಕ ಪರಿಹರಿಸಬಹುದಾಗಿದೆ. ಒಣ ಪ್ರದೇಶಗಳಾದ ತುಮಕೂರು, ಬೀದರ್ ಮತ್ತು ರಾಯಚೂರು ಜಿಲ್ಲೆಯ ರೈತರು ತಮ್ಮ ಜಮೀನುಗಳಲ್ಲಿ ಮೇವು ಬೆಳೆ ಬೆಳೆಯಲು ವಿಶೇಷ ಗಮನ ಹರಿಸಬೇಕಾಗಿದೆ.
4. ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಜಾನುವಾರುಗಳ ಪೌಷ್ಟಿಕ ಆಹಾರ ತಯಾರಿಕೆಯಲ್ಲಿ ಸಾಮರ್ಥ್ಯ ಹೆಚ್ಚಿಸುವ ತರಬೇತಿ ಕಾರ್ಯಕ್ರಮಗಳಿಗೆ ಉತ್ತೇಜನೆ ನೀಡಬೇಕಾಗಿದೆ.

**ಜಾನುವಾರುಗಳ ಮಾರುಕಟ್ಟೆ**

1. ನ್ಯಾಷನಲ್ ಇ–ಮಾರ್ಕೆಟಿಂಗ್ ಲಿಮಿಟೆಡ್ ಮೂಲಕ ಕುರಿ/ಆಡುಗಳಿಗೆ ಡಿಜಿಟಲ್ ಮಾರ್ಕೆಟಿಂಗ್ (ಆ್ಯಪ್) ವ್ಯವಸ್ಥೆಯನ್ನು ಇತ್ತೀಚೆಗೆ ಪ್ರಾರಂಭಿಸಲಾಗಿದೆ. ಇದೇ ಸೌಲಭ್ಯವನ್ನು ಹಂದಿ ಸಾಕಣೆ ಮತ್ತು ಕೋಳಿ ಸಾಕಣೆಗೆ ವಿಸ್ತರಿಸಬೆಕಾಗಿದೆ.
2. ವ್ಯಾಪಾರೋದ್ಯಮದ ಸಂಪರ್ಕದಾರಿ (ಮಾರ್ಕೆಟಿಂಗ್ ಚಾನೆಲ್) ಯನ್ನು ಸುಧಾರಿಸಲು ವರ್ಷಕೊಮ್ಮೆ ಪ್ರತಿ ಜಿಲ್ಲೆಯಲ್ಲಿ ಪಶು ಮೇಳವನ್ನು ಆಯೋಜಿಸಬೆಕು
3. ಜಾನುವಾರು ಮೌಲ್ಯ ಸರಣಿ ಅಭಿವೃದ್ಧಿಗಾಗಿ ಅಸ್ತಿತ್ವದಲ್ಲಿರುವ ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಓ.) ಗಳನ್ನು ಸುಧಾರಿಸಿ ಅಭಿವೃದ್ಧಿಗೊಳಿಸುವಾದು ಮತ್ತು ಹೊಸ ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಓ.ಗಳನ್ನು) ಉತ್ತೇಜಿಸಲು ವಿಶೇಷ ಪ್ರಯತ್ನಗಳ ಅಗತ್ಯವಿದೆ. ಹೆಚ್ಚುವರಿಯಾಗಿ, ಜಾನುವಾರು ಉದ್ಯಮವನ್ನು ಉತ್ತೇಜಿಸಲು ಸ್ವ ಸಹಾಯ ಗುಂಪು (SHG) ಗಳನ್ನು ಪ್ರೋತ್ಸಾಹಿಸಬೇಕು